8. ಗಮನ ಸೆಳೆಯುವ ಸೂಚನೆಗಳು

1) ವಿಷಯ: ಯಶವಂತಪುರ ವಿಧಾನಸಭಾ ಕ್ಷೇತ್ರದ ರಾಮುಹಳ್ಳಿ, ಚಿಕ್ಕನಹಳ್ಳಿ ಮತ್ತು ಚೋಳನಾಯಕನಹಳ್ಳಿಯ ಗ್ರಾಮ ಪಂಚಾಯತಿ ಪರಿಮಿತಿಯಲ್ಲಿ ನಡೆಯುತ್ತಿರುವ ಕಲ್ಲುಗಣಿಗಾರಿಕೆಯಿಂದ ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀ ಎಸ್.ಟಿ. ಸೋಮಶೇಖರ್ (ಯಶವಂತಪುರ):– ಮಾನ್ಯ ಅಧ್ಯಕ್ಷರೆ, ನನ್ನ ಯಶವಂತಪುರ ವಿಧಾನ ಸಭಾ ಕ್ಷೇತ್ರದ ರಾಮುಹಳ್ಳಿ, ಚಿಕ್ಕನಹಳ್ಳಿ ಮತ್ತು ಚೋಳನಾಯಕನಹಳ್ಳಿಯ ಗ್ರಾಮ ಪಂಚಾಯತಿ ಪರಿಮಿತಿಯಲ್ಲಿ ನಡೆಯುತ್ತಿರುವ ಕಲ್ಲುಗಣಿಗಾರಿಕೆಯಿಂದ ತೊಂದರೆಯುಂಟಾಗುತ್ತಿದೆ. ಸುಮಾರು 18 ರಿಂದ 20 ವರ್ಷದಿಂದ ಊರಿನಲ್ಲಿ ಕೆಲವರು permission ತೆಗೆದುಕೊಂಡು ಕಲ್ಲು ಗಣಿಗಾರಿಕೆ ಮಾಡುತ್ತಿದ್ದಾರೆ ಮತ್ತು ಇನ್ನೂ ಕೆಲವರು permission ಪಡೆದುಕೊಳ್ಳದೆಯೇ ಈ ಕೆಲಸವನ್ನು ಮಾಡುತ್ತಿದ್ದಾರೆ. ಇದರಿಂದಾಗಿ ಸುಮಾರು ಮನೆಗಳು ಬಿರುಕು ಬಿಟ್ಟಿರುವ ಬಗ್ಗೆ ಅನೇಕ ದೂರುಗಳನ್ನು ಕೊಟ್ಟರೂ ಕೂಡ ಏನೂ ಪ್ರಯೋಜನವಾಗಲಿಲ್ಲ. ಅದಕ್ಕಾಗಿ ನಿಮ್ಮ ಮುಖಾಂತರ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತಾ ಅವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು:– ಇದಕ್ಕೆ ಉತ್ತರ ಬಂದಿಲ್ಲ. ನಿಮಗೆ ಉತ್ತರವನ್ನು ಅವರಿಂದ ಕೊಡಿಸುತ್ತೇನೆ.

ಶ್ರೀ ಎಸ್.ಟಿ. ಸೋಮಶೇಖರ್:– ಮಾನ್ಯ ಅಧ್ಯಕ್ಷರೆ, Thank you.

ಅಧ್ಯಕ್ಷರು:– ಗಮನ ಸೆಳೆಯುವ ಸೂಚನೆ ಕೊಟ್ಟಿರುವ ಯು.ಬಿ. ಬಣಕಾರ್ ಈಗ ಇಲ್ಲಿ ಇಲ್ಲ. ಕೆ.ಜಿ. ಬೋಪಯ್ಯನವರೆ ನೀವು ಕೇಳಿ.

2) ವಿಷಯ: ಮೈಸೂರು ಬಂಟ್ವಾಳ ರಸ್ತೆಯಲ್ಲಿ ಭಾರೀ ವಾಹನಗಳ ಸಂಚಾರವನ್ನು ನಿಷೇಧಿಸಿದ್ದರೂ, ಭಾರಿ ವಾಹನಗಳು ಸಂಚರಿಸುತ್ತಿರುವುದರಿಂದ ಸಂಪಾಜೆ ಭಾಗದಲ್ಲಿ ರಸ್ತೆ ಕುಸಿದಿದ್ದು. ಆ ರಸ್ತೆಯನ್ನು ದುರಸ್ತಿ ಗೊಳಿಸುವ ಬಗ್ಗೆ.

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಈ ಶಿರಾಡಿಘಾಟ್ ರಸ್ತೆ ರಿಪೇರಿಗೋಸ್ಕರ ಅಲ್ಲಿ ರೋಡ್ ಬ್ಲಾಕ್ ಮಾಡಿ ಮೈಸೂರು–ಬಂಟ್ವಾಳ ರೋಡ್‌ನ್ನು ನಮ್ಮ ಮಡಿಕೇರಿಗಾಗಿ ಕೊಟ್ಟಿದ್ದಾರೆ. ಭಾರೀ ವಾಹನಗಳು ಆ ರಸ್ತೆಯಲ್ಲಿ ಬರಬಾರದು ಎಂದು ನಿಷೇಧ ಮಾಡಿದ್ದಾರೆ. ಆದರೂ ಭಾರೀ ವಾಹನಗಳು ಹೋಗಿ ಎರಡು ಕಡೆ between Madikeri-Sampaje ರಸ್ತೆಯೇ ಕುಸಿದುಹೋಗಿದೆ. ಅದನ್ನು ರಿಪೇರಿ ಮಾಡಿ ಎಂದು ಹೇಳಿದರೆ ಈ ಉತ್ತರದಲ್ಲಿ ಹಳೆಯದು ಕಳೆದ ಮಳೆಗಾಲದಲ್ಲಿ 2013 ರಲ್ಲಿ ಕುಸಿದುಹೋಗಿದ್ದು under progress ಎಂದು ಉತ್ತರದಲ್ಲಿ ಹೇಳುತ್ತಾರೆ. ಅಲ್ಲಿ 22 ಟೈರ್‌ಗಳಿರುವ ಲಾರಿಗಳು ಹೋಗಿ ಎರಡು ಕಡೆ ಮತ್ತೆ ಕುಸಿದುಹೋಗಿದೆ. ಈ ರೀತಿಯ ತಪ್ಪು ಉತ್ತರ ಕೊಟ್ಟರೆ ಹೇಗೆ ಅಧ್ಯಕ್ಷರೆ,

ಅಧ್ಯಕ್ಷರು:– ಈಗ ಒಂದು ಕೆಲಸ ಮಾಡೋಣ. ಈಗ PWD Minister ಸದನದಲ್ಲಿ ಇಲ್ಲ. ನಾಳೆ ಬಂದರೆ ಇದರ ಬಗ್ಗೆ ನೀವು ಅವರನ್ನು clarification ಕೇಳಲು ಅವಕಾಶ ಮಾಡಿಕೊಡುತ್ತೇನೆ.

3) **ವಿಷಯ: ರಾಜ್ಯದಲ್ಲಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳಿಗೆ ಉಚಿತವಾಗಿ ಅಡುಗೆ ಅನಿಲ ಸಂಪರ್ಕವನ್ನು ನೀಡುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿದ್ದು, ಈ ಯೋಜನೆಯನ್ನು ಎ.ಪಿ.ಎಲ್. ಪಡಿತರ ಚೀಟಿ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕುಟುಂಬಗಳಿಗೂ ವಿಸ್ತರಿಸುವ ಬಗ್ಗೆ.**

ಶ್ರೀ ಬಿ.ಬಿ. ನಿಂಗಯ್ಯ:– ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳಿಗೆ ಉಚಿತವಾಗಿ ಅಡುಗೆ ಅನಿಲ ಸಂಪರ್ಕವನ್ನು ನೀಡುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿದ್ದು, ಈ ಯೋಜನೆಯನ್ನು ಎ.ಪಿ.ಎಲ್. ಪಡಿತರ ಚೀಟಿ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕುಟುಂಬಗಳಿಗೂ ವಿಸ್ತರಿಸುವ ಬಗ್ಗೆ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ.